KABD500013382022

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಮನಾಬಾದ.**
**ಸಿ.ಸಿ. ನಂ: 775/2022**

ದಿನಾಂಕ: 02-08-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪ್ರಾಸಾ : 01
ಚಾಸಾ : 01

| | | |
|---|---|---|
| ಹೆಸರು | :: | ಮಹ್ಮದಸಾಬ |
| ತಂದೆಯ/ಗಂಡನ ಹೆಸರು | :: | ಅಬ್ದುಲಸಾಬ |
| ವಯಸ್ಸು | :: | 43- ವರ್ಷ |
| ಉದ್ಯೋಗ | :: | ಕೂಲಿ ಕೆಲಸ |
| ವಾಸಸ್ಥಳ | :: | ಬಸವಕಲ್ಯಾಣ |

**ಸಾಕ್ಷಿಯ ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ನನಗೆ ಮೃತ ಮಸ್ತಾನ ಹಾಗೂ ಮೃತ ಸೋಹೇಬ ರವರ ಪರಿಚಯ ಇದೆ. ನನಗೆ ಚಾಸಾ-8 ರಿಂದ 13 ರವರ ಪರಿಚಯ ಇದೆ. ನನಗೆ 1 ನೇ ಆರೋಪಿ ಪರಿಚಯ ಇದೆ. ದಿನಾಂಕ 30-06-2022 ರಂದು ನಾನು ಬಸವಕಲ್ಯಾಣದಲ್ಲಿದ್ದಾಗ ಚಾಸಾ-9 ರವರು ನನಗೆ ಮೃತ ಮಸ್ತಾನರವರ ಫೋನಿನಿಂದ ದೂರವಾಣಿ ಕರೆ ಮಾಡಿ ಅಪಘಾತದ ವಿಷಯ ತಿಳಿಸಿದರು. ಕೂಡಲೇ ನಾನು ಹುಮನಾಬಾದ ಸರಕಾರಿ ಆಸ್ಪತ್ರೆಗೆ ಬಂದು ಮಸ್ತಾನ ಮತ್ತು ಸೊಹೇಬರವರನ್ನು ನೋಡಿರುತ್ತೇನೆ. 1 ನೇ ಆರೋಪಿ ಕೂಡ ಆಸ್ಪತ್ರೆಯಲ್ಲಿ ಹಾಜರಿದ್ದರು. ಅಪಘಾತದ ಬಗ್ಗೆ ಚಾಸಾ-9 ರವರಿಗೆ ವಿಚಾರಿಸಲಾಗಿ 1 ನೇ ಆರೋಪಿ ತಪ್ಪಿನಿಂದ ಅಪಘಾತ ಆಗಿರುವುದಾಗಿ ತಿಳಿಸಿರುತ್ತಾರೆ. ಅಪಘಾತ ಹೇಗೆ ಆಯಿತು ಗೊತ್ತಿಲ್ಲ. ಅಪಘಾತಪಡಿಸಿದ ವಾಹನ ಸಂಖ್ಯೆ ಗೊತ್ತಿಲ್ಲ. ಅಪಘಾತದ ಬಗ್ಗೆ ನಾನು ದೂರು ನೀಡಿದ್ದೇನೆ. ದೂರನ್ನು ನಿಪಿ-1 ಎಂದು ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಪೊಲೀಸರಿಗೆ ಮೂರು

ಮರುಹೇಳಿಕೆಗಳನ್ನು ನೀಡಿದ್ದೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).

**ಪಾಟೀ ಸವಾಲು ಸಸಅ ರವರಿಂದ:**

"ದಿನಾಂಕ 30-06-2022 ರಂದು ನಾನು ಕೆಲಸ ಕುರಿತು ರಾಜೇಶ್ವರದಲ್ಲಿದ್ದಾಗ_______________________________________ಹುಮನಾಬಾದ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇವೆ ಅಂತಾ ತಿಳಿಸಿರುತ್ತಾನೆ" ಎಂದು ನಿಪಿ-1 ರಂತೆ ದೂರು ನೀಡಿದ್ದೇನೆ ಎಂದರೆ ಸರಿ.

**ಪಾಟೀ ಸವಾಲು: ಶ್ರೀ ಎಸ್ ಎಂ ಆರ್ 1 ನೇ ಆರೋಪಿ ಪರ ವಕೀಲರಿಂದ:**

ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನಿಪಿ-1 ರಲ್ಲಿ ಏನು ಬರೆಯಲಾಗಿದೆ ಗೊತ್ತಿಲ್ಲ ಎಂದರೆ ಸರಿ. ನಿಪಿ-1 ನ್ನು ಯಾರು ಗಣಕೀಕೃತ ಮಾಡಿರುತ್ತಾರೆ ಗೊತ್ತಿಲ್ಲ. ನಿಪಿ-1 ರಲ್ಲಿಬರೆದ ವಿಷಯ ನನಗೆ ಓದಿ ತಿಳಿಸಿರುವುದಿಲ್ಲ ಎಂದರೆ ಸರಿ. ನಿಪಿ-1 ರಲ್ಲಿ ಬರೆದ ವಿಷಯ ಗೊತ್ತಿಲ್ಲ ಎಂದರೆ ಸರಿ. ನನಗೆ ಅಪಘಾತದ ವಿಷಯಕ್ಕೆ ಸಂಬಂಧಿಸಿದಂತೆ ಪೊಲೀಸರು ವಿಚಾರಿಸಿಲ್ಲ, ನಾನು ಗಾಯಾಳುಗಳನ್ನು ಅಪಘಾತಕ್ಕೆ ಸಂಬಂಧಿಸಿದಂತೆ ವಿಚಾರಿಸಿಲ್ಲ. ನಾನು ಹುಮನಾಬಾದ ಆಸ್ಪತ್ರೆಗೆ ಬಂದು ಗಾಯಾಳುಗಳನ್ನು ಹೆಚ್ಚಿನ ಚಿಕಿತ್ಸೆಗಾಗಿ ಗುಲಬರ್ಗಾಕ್ಕೆ ಕರೆದುಕೊಂಡು ಹೋಗಿರುತ್ತೇನೆ ಎಂದರೆ ಸರಿ. ಈ ಸಂದರ್ಭದಲ್ಲಿ ನನ್ನನ್ನು ಅಪಘಾತದ ಬಗ್ಗೆ ಯಾರೂ ವಿಚಾರಿಸಿಲ್ಲ ಎಂದರೆ ಸರಿ.

ಮಸ್ತಾನ ಮತ್ತು ಸೊಹೇಬ ತೀರಿಕೊಂಡ ನಂತರ ಅಪಘಾತದ ಬಗ್ಗೆ ವಿಚಾರಿಸಲಾಗಿ ಮೃತರು ವೇಗವಾಗಿ ವಾಹನವನ್ನು ಚಲಾಯಿಸಿ 1 ನೇ ಆರೋಪಿಯ ವಾಹನಕ್ಕೆ ಡಿಕ್ಕಿಪಡಿಸಿ ಅಪಘಾತಕ್ಕೀಡಾಗಿರುತ್ತಾರೆಂದು ಗೊತ್ತಾಯಿತು ಎಂದರೆ ಸರಿ. ನಾನು ಮುಖ್ಯವಿಚಾರಣೆಯಲ್ಲಿ ನುಡಿದ ಎಲ್ಲಾ ಸಾಕ್ಷಿ ಸುಳ್ಳು ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫಸಿ ಹುಮನಾಬಾದ.